## ॥ ಅಂಜಿಕಿನ್ಯಾತಕಯ್ಯ ॥

ಅಂಜಿಕಿನ್ಯಾತಕಯ್ಯ । ಸಜ್ಜನರಿಗೆ । ಅಂಜಿಕಿನ್ಯಾತಕಯ್ಯ ॥ ಪ ॥
ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ॥ ಅ ॥

ಕನಸಲಿ ಮನಸಲಿ ಕಳವಳವಾಗದೆ ।
ಹನುಮನನೆನೆದಕೆ ಹಾರಿ ಹೋಗದೆ ಪಾಪ ॥ ೧ ॥

ರೋಮರೋಮಕೆ ಕೋಟಿ ಅಂಶವುದುರಿಸಿದ ।
ಭೀಮನ ನೆನೆದರೆ ಬಿಟ್ಟು ಹೋಗದೆ ಪಾಪ ॥ ೨ ॥

ಪುರಂದರವಿಠಲನ ಪೂಜೆಯ ಮಾಡುವ ।
ಗುರುಮಧ್ವರಾಯರ ಸ್ಮರಣೆ ಮಾಡಿದ ಮೇಲೆ ॥ ೩ ॥